# ಚಿಗುರು

# H.H.S.I.B.Swamiji's Higher Secondary School Edneer

# 2018-19



# ಚಿಗುರು



# ಮುನ್ನುಡಿ

ಕೇರಳ ರಾಜ್ಯ ಶಿಕ್ಷಣ ಅಭಿವೃದ್ಧಿಯ ಅಂಗವಾಗಿ ರಾಜ್ಯಶಿಕ್ಷಣ ಇಲಾಖೆ ನಿರ್ದೇಶನದೊಂದಿಗೆ ಜಾರಿಗೊಳಿಸಿದ 'ಲಿಟ್ಲ್ ಕೈಟ್ಸ್'ನ ಒಂದು ಭಾಗವಾಗಿ ಸಮಗ್ರ ಬೆರಳಚ್ಚು ತಂತ್ರಜ್ಞಾನದಲ್ಲಿ ಶಾಲಾ ಮಕ್ಕಳ ಕಲಿಕೆಯನ್ನು ತೋರಿಸುವ ಒಂದು ಆವಿಷ್ಕಾರ ಇಂದು ಅಭಿವೃದ್ಧಿಯತ್ತ ಸಾಗುತ್ತಿದೆ.ಈ 'ಕೈಟ್ಸ್'ನ ನಿಯಮಾವಳಿಗಳನ್ನು ಪರಿಶೀಲಿಸಿ,ಶ್ರೀ ಸ್ವಾಮಿಜೀಸ್ ಹೈಯರ್ ಸೆಕೆಂಡರಿ ಶಾಲೆ ಎಡನೀರು ಇಲ್ಲಿಯ ಅಧ್ಯಾಪಕ , ವಿದ್ಯಾರ್ಥಿ,ವಿದ್ಯಾರ್ಥಿನಿಯರ(2018-19) ಪರಿಶ್ರಮದ ಕೊಡುಗೆಯೇ '**ಚಿಗುರು**' ಸಂಚಿಕೆ ಬಹಳಷ್ಟು ಮಹತ್ವ ಪಡೆದಿದೆ.

ಕನ್ನಡ,ಸಂಸ್ಕೃತ,ಹಿಂದಿ,ಇಂಗ್ಲೀಷ್,ಮಲೆಯಾಳಂ ಭಾಷೆಗಳಲ್ಲಿ ಮಕ್ಕಳ ಕಲ್ಪನೆಯ ಲೇಖನಗಳು ಬೆರಳಚ್ಚು ತಂತ್ರದಲ್ಲಿ ಹೊರತರುತ್ತಿರುವುದು ಶ್ಲಾಘನೀಯ.ಒಂಭತ್ತನೇಯ ತರಗತಿಯ ಮಕ್ಕಳು ತಮ್ಮ ತಂತ್ರಗಾರಿಕೆಯಲ್ಲಿ ತಮ್ಮದೇ ಆದ ಕಲ್ಪನೆಗಳನ್ನು ಕಥೆ,ಲೇಖನ,ಕವಿತೆಗಳಲ್ಲಿ ನೀಡಿರುತ್ತಾರೆ.

ಇಂದಿನ ವೈಜ್ಞಾನಿಕ ಯುಗದಲ್ಲಿ ಈ ಶಿಕ್ಷಣಕ್ಕೆ ಮಹತ್ವವಾದ ಸ್ಥಾನವನ್ನು ನೀಡುತ್ತಾ ಬಂದಿದೆ.ಹಾಗಾಗಿ ವಿದ್ಯಾರ್ಥಿ,ವಿದ್ಯಾರ್ಥಿನಿಯರ ಪರಿಶ್ರಮಕ್ಕೆ ತಮ್ಮದೇ ಆದ ವಿವಿಧ ಬರಹಗಳನ್ನು ನೀಡಿರುತ್ತಾರೆ.ಮುಂದೆಯೂ ನೀಡಲಿದ್ದಾರೆ.ಶಾಲಾ ಅಧ್ಯಾಪಕರ ಸಮಗ್ರ ನಿರ್ದೇಶನವು ಇದರ ಬೆನ್ನೆಲುಬಾಗಿದ್ದು ಉತ್ತಮ ಸಾಧನೆಯನ್ನು ತೋರಿಸಿದ್ದಾರೆ.

ಲಿಟ್ಲ್ ಕೈಟ್ ಅಧ್ಯಾಪಕರು ಮತ್ತು
ವಿದ್ಯಾರ್ಥಿ,ವಿದ್ಯಾರ್ಥಿನಿಯರು

## Table of Contents

ಹೂದೋಟ....4
ಕಾಯಕವೇ ಕೈಲಾಸ....7
ಪರಿಸರ....9
ಪರಿಶ್ರಮದಿ ಬಾಳು....11
AN IDEAL STUDENT....13
Crabby Cappers....14
ಪುಸ್ತಕದ ಮಹತ್ವ....16
बाँसुरी....17
ದಾರಿ....18
ಜಾಣಸೋಮು....21
वनम्....26
स्वचछता....27
ಸ್ವಾತಂತ್ರ್ಯದಿನಾಚರಣೆಯ ಮಹತ್ವ....33
അസൂയ തീരാ നല്ലദല്ല....39
Two good friends....41
ಪರಿಶ್ರಮವೇ ಪರಮಧರ್ಮ....44
पुल बनी थी माँ....47

# ಹೂದೋಟ

ಗಿಡದಲ್ಲಿ ಮುಗ್ಗೊಂದು ಕಣ್ಣೆದುರು ಶೋಭಿಸಲು.
ಎಲೆಗಳಲಿ ಇಬ್ಬನಿಯು ಮುತ್ತಿನಂತ್ತಿತ್ತು.
ಮುಂಜಾವಿನಾಗಳಿಗೆ ಹೂದೋಟದಲ್ಲಿರಲು
ಮೂಕವಿಸ್ಮಿತನಾದೆ ಅಲ್ಲಿ ನಿಂತು.



ಪುಟ್ಟ ಚಿಟ್ಟೆಯೊಂದಿತ್ತು ಹೂವಲ್ಲಿ ಕುಳಿತಿತ್ತು.
ಮಕರಂದದಾ ಸವಿಯ ಆಸ್ವಾದಿಸುತಿತ್ತು.
ಹೂವಿಂದ ಹೂವಿಗೆ ಜಿಗಿಯುತಿತ್ತು.
ಅದು ಸೂರ್ಯರಶ್ಮಿಗೆ ಹೊಳೆಯುತಿತ್ತು.

ಇಬ್ಬನಿಯು ಕರಗಿತ್ತು ನೇಸರನು ಕರಗಿಸಿತು.
ಮುತ್ತಿನ ಸರದಂತೆ ಅದು ಕಾಣುತಿತ್ತು.
ಭೂದೇವಿ ಆ ಸರವ ತೊಟ್ಟು ನಿಂತಿತ್ತು.
ಹಸಿರು ಸೀರೆಯನುಟ್ಟಂತೆ ಮೆರೆಯುತಿತ್ತು.

ಬಣ್ಣ ಬಣ್ಣದ ಹೂವು ಅಲ್ಲಿತ್ತು,ಅರಳಿತ್ತು
ಭೂದೇವಿಯ ಸೌಂದರ್ಯ ಹೆಚ್ಚುತಿತ್ತು
ಬಣ್ಣ ಬಣ್ಣದ ಸೆರಗು ಹೂದೋಟವಾಗಿತ್ತು
ಹೂವೇ ಅದಕ್ಕೆ ಮೆರಗು ನೀಡಿತ್ತು

ಹಕ್ಕಿ  ಸುಪ್ರಭಾತವ ಹಾಡುತಿತ್ತು
ಅದು ಭೂಮಿಯ ಧ್ವನಿಯಂತೆ ಕೇಳುತಿತ್ತು
ಶಶಿಯ ನೆನಪಲ್ಲಿ ಕಾಡುತಿರಲು
ಸೂರ್ಯನೇ ಮಿನುಗಿದನು ಅವನು ತಿಳಿದು

ಹೂದೋಟದ ಚೆಲುವು ಈಗೆಲ್ಲಿ ಇನ್ನೆಲ್ಲಿ
ಎಲ್ಲವೂ ಆಯಿತು ವಂಶನಾಶ

ಆ ಚೆಲುವು ಇನ್ನೆಲ್ಲಿ ನಾಕಾಣೆ ಇಂದಿಲ್ಲಿ
ಆಗಿ ಹೋಯಿತೆಲ್ಲ ಸರ್ವನಾಶ

ಮುಂದಿನ ಮಕ್ಕಳಿಗೆ ಹೂವಿಲ್ಲ,ಜೇನಿಲ್ಲ
ಹಾಳು ಮಾಡಿದೆವು ನಾವು ಇಂದೆ ಎಲ್ಲಾ
ಉಳಿಸೋಣ ಹೂದೋಟ  ಬೆಳೆಸೋಣ ಗಿಡವೆಲ್ಲ
ಉಸಿರನ್ನು ಊದೋಣಾ ಅವಕ್ಕೆಲ್ಲಾ

ಅಮೃತ ಯು.ಆರ್

*9 ನೇ ತರಗತಿ*

*&&&&&&&&&&&&&&&&&&&&&&&&&&&&&&*

# ಕಾಯಕವೇ ಕೈಲಾಸ



ಬನ್ನಿ ಬನ್ನಿ ಗೆಳೆಯರೇ
ದುಡಿಮೆಯನ್ನು ಮಾಡುವ
ಕೆಸರು ಗದ್ದೆಯನ್ನು ತುಳಿದು
ಭತ್ತವನ್ನು ಬಿತ್ತುವಾ

ಕಾಯಕವೇ ಕೈಲಾಸ ಎಂದು
ದುಡಿತದಿರಿಮೆಯ ತಿಳಿಯುವ
ಬಿಸಿಲು,ಮಳೆ,ಚಳಿಯ ಮರೆತು
ಪರಿಶ್ರಮದಿಂದಲಿ ದುಡಿಯುವ

ಕೈಯನೆತ್ತಿ ನೇಗಿಲ ಹಿಡಿದು
ಗದ್ದೆಯ ದಾರಿಯನು ಹಿಡಿಯುವ
ಒಂದು ಹಿಡಿ ಮಣ್ಣನ್ನು ಹಿಡಿದು
ಮಣ್ಣರಸವ ಅರಿಯುವ

ಹುಲ್ಲ ತೆಗೆದು ತೆರವುಗೊಳಿಸಿ


ಗಿಡವ ನೆಟ್ಟು ತೆರವುಗೊಳಿಸಿ
ಪರಿಶ್ರಮದಿ ಮುಂದೆ ಸಾಗಿ
ಒಗ್ಗಟ್ಟನ್ನು ಬಯಸುವ

**ಮನಿಶ.ಕೆ**

***9 ನೇ ತರಗತಿ***

**************************************

# ಪರಿಸರ



ನೋಡು ಬಾ ನೋಡು ಬಾ
ನಮ್ಮ ಪರಿಸರ
ಅಂದವಾದ ಚಂದವಾದ
ಹಿತಕರ ಪರಿಸರ
ಸ್ವಚ್ಛ ಭಾರತ ಅಭಿಯಾನ
ನರೇಂದ್ರ ಮೋದಿಯ ವರದಾನ
ಮಾಡದೆ ಅದಕೆ ಅವಮಾನ
ನೀಡಿರಿ ಅವರಿಗೆ ಸನ್ಮಾನ

ಎಲ್ಲೆಲ್ಲೂ ಹಚ್ಚ ಹಸಿರು
ಉಳಿಸುವುದು ಉಸಿರು
ಇದೇ ಭೂತಾಯಿ ಬಸಿರು
ಮಾಡಬೇಡಿ ಅದನ್ನು ಬಂಜರು
ಕಾಡುಗಳು ನಮ್ಮ ಸಂಪತ್ತು
ಕಡಿದರೆ ನಮಗೆ ಆಪತ್ತು
ಮಾಡುವರೆಲ್ಲಾ ಕಸರತ್ತು

# ಇದರಿಂದ ನಮಗೆ ವಿಪತ್ತು

ಅಂದ ಚಂದ ಪರಿಸರ

ದೇಹಕೆ ಇದು ಹಿತಕರ

ಬೆಳೆಸಿರಿ ನೀವು ಮರ

ಜೀವಿಸಿ ನೀವು ಸುಖಕರ.

**ವೈದೇಹಿ.ಕೆ**

**9 ನೇ ತರಗತಿ**

!!!!!!!!!!!!!!!!!!!!!!!!!!!!!!!!!!!!!!!!!!!!!!!!!!!!!!!!!!!!!!!!!!

# ಪರಿಶ್ರಮದಿ ಬಾಳು

ಬದುಕೆಂಬ ಸಾಗರದಲಿ.
ದುಡಿಮೆಯೆಂಬ ಆಗಸದಲಿ.
ಬಾಳುವ ನಾವು ಸಂತೋಷದಲಿ.

ಪರಿಶ್ರಮಿಸುವಾ ನಾವು ಪರಿಶ್ರಮಿಸುವಾ..........
ನಾಳೆಗಾಗಿ ಪರಿಶ್ರಮಿಸುವಾ..........



ದುಡಿಮೆಯೇ ನಮ್ಮ ನಾಳೆಯಾಗಲಿ
ಕಷ್ಟವೇ ನಮ್ಮ ಮಿತ್ರನಾಗಲಿ
ಪರಿಶ್ರಮವೇ ನಮ್ಮ ಸಂಪತ್ತಾಗಲಿ

ಪರಿಶ್ರಮಿಸುವಾ ನಾವು ಪರಿಶ್ರಮಿಸುವಾ..........
ನಾಳೆಗಾಗಿ ಪರಿಶ್ರಮಸುವಾ........

ದುಡಿಮೆಯೇ ನಮ್ಮ ದೇವರಾಗಲಿ..........
ಶ್ರಮವೇ ನಮ್ಮ ಚಿಂತೆಯಾಗಲಿ

ಪ್ರಯತ್ನವೇ ನಮ್ಮ ಜಯವಾಗಲಿ.

ಪರಿಶ್ರಮಿಸುವಾ ನಾವು ಪರಿಶ್ರಮಿಸುವಾ..........
ನಾಳೆಗಾಗಿ ಪರಶ್ರಮಿಸುವಾ.......

ಪರಿಶ್ರಮವೇ ನಮ್ಮ ಕನಸಾಗಲಿ
ದುಡಿಮೆಯೇ ನಮ್ಮ ಗುರಿಯಾಗಲಿ.
ಪರಿಶ್ರಮವೇ ನಮ್ಮ ಬಂಧುವಾಗಲಿ

ಪರಿಶ್ರಮಿಸುವಾ ನಾವು ಪರಿಶ್ರಮಿಸುವಾ.........
ನಾಳೆಗಾಗಿ ಪರಿಶ್ರಮಿಸುವಾ..........

ಪರಿಶ್ರಮದಿಂದ ಬಾಳುವ ಸಂತೋಷದಲಿ
ದುಡಿಮೆಯಿಂದ ಬದುಕುವ ಸುಖದಲಿ.
ಪ್ರಯತ್ನದಿಂದ ಜೀವಿಸುವ ವಿಜಯಿಸುತ್ತಲಿ.

ಪರಿಶ್ರಮಿಸುವಾ ನಾವು ಪರಿಶ್ರಮಿಸುವಾ.........
ನಾಳೆಗಾಗಿ ಪರಿಶ್ರಮಿಸುವಾ........

**ಸೀಮ.ಎಸ್**

**9 ನೇ ತರಗತಿ**

////////////////////////////////////////////////////////////

# AN IDEAL STUDENT

People often say that an ideal student is one who studies well. Of course a student must work hard and he must be sincere in his work. It is well known that a person is healthy only if he has a sound mind in a sound body. Hence body health is as important as mental health. If a student is paying attention only to his studies well, he will not have a healthy body. So he must find out time to develop his physical health. He must spare some time to play some games also. This will not affect his studies, if he is careful not to waste his time. While studying one should develop the good qualities such as punctuality,good manners,obedience etc. A student who is able to develop all these qualities can be considered as an ideal student.

Viveka.S.Bhat

@@@@@@@@@@@@@@@@@@@@@

# Crabby Cappers

**An acorn is more than just an acorn**
**within it is a gaint oak.**
**A caterpiller is more than just a catepiller**
**within it is a brilliant butterfly.**

**An egg is more than just an egg,**
**within it is a beautiful bird.**
**A thought is more than just a thought,**
**within it is a generous deed.**

**A dream is more than just a dream,**
**within it is a joyous reality .**
**An infant is more than just an infant**


**Within it is a trimphant adult**

**Unfinished things are more than**
**Human eyes can see....**

**Fathimath Nishma**

**************************************

# ಪುಸ್ತಕದ ಮಹತ್ವ



ತುಕ್ಕು ಹಿಡಿದಿದೆ ಮಸ್ತಕವು
ಇದಕ್ಕೊಂದು ದಾರಿ ಪುಸ್ತಕವು
ಪುಸ್ತಕವ ಓದಿ ಬೆಳೆಯೋಣ
ಚಿಂತಿಸಿ ವಿವೇಕ ಪಡೆಯೋಣ

ನೀತಿಯನರಿಯಲು ಗದ್ಯವು
ಇಂಪಲಿ ಹಾಡಲು ಪದ್ಯವು
ಇಹುದು ತರತರ ಪುಸ್ತಕವು
ಚುರುಕಾಗಲೆಂದೇ ಮಸ್ತಕವು

ಶ್ರದ್ದೆಯಿಂದ ಪಾಠ ಕಲಿಯೋಣ
ಜೊತೆಗೆ ಮಜದ ಆಟವಾಡೋಣ
ಪುಸ್ತಕ ಓದಿ ಬೆಳೆಯೋಣ
ಜ್ಞಾನವೆಂಬ ದೀಪವ ಬೆಳಗೋಣ

ಗೆಳೆತನ ಬೆಳಸೋಣ
ದ್ವೇಷವ ಮರೆಯೋಣ

# ಕನಸಲಿ ಬೆರೆಯೋಣ

# ಹಕ್ಕಿಗಳಾಗಿ ಬಾನಲಿ ಹಾರೋಣ

**ಮುಸ್ತಫ.ಸಿ**

**9 ನೇ ತರಗತಿ**

*++++++++++++++++++++++++++++++++*

# बाँसुरी



बाँसुरी मेरी प्यारी कितनी
मीठ राग सुनाति
चंचल-चंचल दुनिया सारी
ताल उसी का लेती

कोयल रानी चुपके आके
गीत मधुर अपनाती
मनहर तितली फूल छोडके
धुन में लीन हो जाती

कल-कल करती बहती नदिया
अनहद में खो जाती
मीठे राग सुनाती बाँसुरी
सबका दिल दहलाती

अमृता.यु.आर

# ದಾರಿ

ನಮ್ಮ ದಾರಿಯೆಲ್ಲಾ ಒಂದೇ,
ಹಲವು ರೀತಿಯ ದಾರಿಗಳು
ಸ್ನೇಹದ ದಾರಿಯು ಒಂದೇ,
ಅದರಲ್ಲಿ ಹೋಗುವ ಎಲ್ಲರೂ

ವಿವಿಧ ರೀತಿಯ ದಾರಿಗಳಲಿ,
ಸಮಾನತೆಯ ದಾರಿಯು ಒಂದು
ದಾರಿ ಇಲ್ಲದಿದ್ದರೆ ಹೇಗೆ
ನಾವೆಲ್ಲರೂ ಹೋಗುವುದು

ಬೆಳದಿಂಗಳು ಚಿಮ್ಮುವ ದಾರಿಯಲಿ
ಎಲ್ಲರೂ ಹೋಗುವ ಒಟ್ಟಿಗೆ
ಮುಂಜಾನೆಯ ಹೊತ್ತಲಿ ದಾರಿಯು
ಹೊಳೆ ಹೊಳೆಯುತಿದೆ ಮಿಂಚಿನಂತೆ

ಕಾಮನ ಬಿಲ್ಲಿನಂತೆ ಹೊಳೆಯುವ ದಾರಿಯಲಿ

ನಡೆಯುವ ಎಲ್ಲರೂ ಸಂತಸದಲಿ

ಮುಂಜಾನೆಯ ಸಮಯದಲಿ

ಎಲ್ಲರೂ ಧೈರ್ಯದಿಂದ ಸಾಗೋಣ

ಹಲವು ದೇಶಗಳಲಿ,ಹಲವು ರಾಜ್ಯಗಳಲಿ

ದಾರಿಯು ಎಲ್ಲರಿಗೂ ಒಂದೇ

ವಿವಿಧ ವಸ್ತುಗಳಿಂದ ಕೂಡಿದ ದಾರಿಯು

ಎಲ್ಲವೂ ಇಂದು ನಾಶವಾಗುತಿವೆ

ಕಾಡುಗಳು ನಾಶವಾಗುತಿವೆ ಇಂದು

ಕಾಂಕ್ರೀಟ್ ಕಟ್ಟಡಗಳಾಗುತಿವೆ

ಪರಿಸರ ನಾಶವಾಗುತಿವೆ ಇಂದು

ಟಾರ್ ದಾರಿಗಳಾಗುತಿವೆ

ಎಲ್ಲರೂ ಹೋಗೋಣ ದಾರಿಯಲಿ

ಸಂರಕ್ಷಿಸುವ ಎಲ್ಲರಿಗೂ ದಾರಿಯನು

ಎಲ್ಲರೂ ಒಟ್ಟಿಗೆ ಹೋರಾಡಿ

ವಿಜಯಿಸುವ ನಮಗೆ ಎಲ್ಲರಿಗೂ

ಭೇದ ಭಾವವಿಲ್ಲದೆ ನಮಗೆ

ಸಮಾನತೆಯ ದಾರಿಯಲಿ ಸಾಗೋಣ

ಹೋಗೋಣ ನಡೆಯೋಣ

ಸಮಾನತೆಯ ದಾರಿಯಲಿ ಹೋಗೋಣ

ಹೆಚ್ಚು ಕಾಲ ಬಾಳಲಿದೆ

ಉಸಿರಾಟದ ದಾರಿಯು ಎಂದೆಂದಿಗೆ

ಹೋಗೋಣ ನಡೆಯೋಣ

ಹೊಸ ದಾರಿಯಲಿ ಸಾಗೋಣ

ತಪ್ಪಾದ ದಾರಿಯಲಿ ಹೋಗಬೇಡಿ

ಒಳ್ಳೆಯ ದಾರಿಯಲಿ ಹೋಗೋಣ

ಹೋಗೋಣ ನಡೆಯೋಣ

ಒಳ್ಳೆಯ ದಾರಿಯಲಿ ಸಾಗೋಣ

ಹೋಗೋಣ ನಡೆಯೋಣ

ದೇವರು ನಮಗೆ ಒಂದೇ ದಾರಿಯಲಿ

ಕಾಣಿಸುತಿಹ

## ಒಂದು ಮಾಡುತಿದೆ ಆ ದಾರಿಯು
## ಎಲ್ಲರಿಗೂ ಧೈರ್ಯ ತೋರಿಸುತಿದೆ

ಅನ್ವಿತಾ .ಯನ್.ಸಿ

*9 ನೇ ತರಗತಿ*

*############################################################*

# ಜಾಣಸೋಮು

ಶಾಂತಹಳ್ಳಿ ಎಂಬುದೊಂದು ಗ್ರಾಮ.ಈ ಗ್ರಾಮದಲ್ಲೊಂದು ಬಡಕುಟುಂಬವು ವಾಸವಾಗಿತ್ತು. ಮನೆಯ ಯಜಮಾನನಾದ ಚುಕ್ರನು ಚಮ್ಮಾರ ವೃತ್ತಿಯಲ್ಲಿ ತೊಡಗಿದ್ದನು.ಈತನು ಓರ್ವ ಹೆಣ್ಣು ಮಗಳನ್ನೂ ಗಂಡು ಮಗನನ್ನೂ ಪಡೆದಿದ್ದನು.ತನ್ನ ಹೆಂಡತಿಯು ದೂರದ ಶಾಲೆಯೊಂದರಲ್ಲಿ ಗಂಜಿ ಬೇಯಿಸಲು ಹೋಗುತ್ತಿದ್ದಳು.ಆದರೆ ಇವರಿಬ್ಬರ ಈ ಆದಾಯವು ಮನೆಯ ಖರ್ಚು ವೆಚ್ಚಗಳಿಗೂ ಮಕ್ಕಳ ವಿದ್ಯಾಭ್ಯಾಸಕ್ಕೂ ಸಾಕಾಗಿರಲಿಲ್ಲ.ಚುಕ್ರನು ಓರ್ವ ಮೇಲ್ಜಾತಿಯ ವ್ಯಕ್ತಿಯ ತೋಟದ ಒಂದು ಮೂಲೆಯಲ್ಲಿ ಮನೆ ಮಾಡಿದ್ದನು.ಪ್ರತಿ ತಿಂಗಳ ಕೊನೆಯಲ್ಲಿ ತೋಟದ ಯಜಮಾನನಿಗೆ ಗೇಣಿಯನ್ನು ನೀಡಬೇಕಿತ್ತು.ಚುಕ್ರನ ಮಗನಾದ ಸೋಮುವು ಕಲಿಯುವುದರಲ್ಲಿ ಬಹಳ ಜಾಣನಾಗಿದ್ದನು.ತನ್ನ ಹೆಣ್ಣು ಮಗಳನ್ನು ಮದುವೆ ಮಾಡಲು

ತೆಗೆದ ಸಾಲವನ್ನು ತೀರಿಸಲು ಇಂದೂ ಅವನಿಂದ ಸಾಧ್ಯವಾಗಲಿಲ್ಲ.ಇದು ಚುಕ್ರನಿಗೆ ತೊಂದರೆಗಿಟ್ಟಿತು . ಆತನದೊಂದು ಸಮಾಧಾನವೆಂದರೆ ತನ್ನ ಮಗ ಸೋಮು ಕಲಿತು ಒಳ್ಳೆಯ ಉದ್ಯೋಗವನ್ನು ಪಡೆದು ಈ ಸಾಲವನ್ನುತೀರಿಸಬಹುದು.

ದೀಪಾವಳಿಯ ರಜೆ ಮುಗಿದು ಶಾಲೆಯು ಇಂದು ಶುರುವಾಗುತ್ತದೆ.ಸೋಮುವು ಮೂರು ಕಿ .ಮೀ ದೂರದಲ್ಲಿರುವ ಶಾಲೆಗೆ ಹೋಗುತ್ತಿದ್ದನು.ಆತನು ಬೇಗ ಬೇಗ ಹೊರಟು ಬ್ಯಾಗಿನಲ್ಲಿ ಪುಸ್ತಕವನ್ನು ತುಂಬಿಸಿ ಮನೆಯಿಂದ ಹೊರಟನು.ತನ್ನ ಚಪ್ಪಲಿ ತುಂಡಾದುದರಿಂದ ಆತನಿಗೆ ಬರಿಗಾಲಲ್ಲಿ ನಡೆಯಬೇಕಾಯಿತು.ಶಾಲೆಯಲ್ಲಿ ಗಂಟೆ ಬಡಿದುದರ ಶಬ್ದಕ್ಕೆ ಕಿವಿಗೊಟ್ಟ ಸೋಮು ಜಿಂಕೆಯಸರ ವೇಗದಲ್ಲಿ ಓಡಿದನು.ತರಗತಿಯಲ್ಲಿ ಮಕ್ಕಳೆಲ್ಲರೂ ನಿಶ್ಶಬ್ಧರಾಗಿ ಕುಳಿತಿದ್ದರು.ಸೋಮುವು ಅಧ್ಯಾಪಕರಲ್ಲಿ ಕೇಳಿ ತರಗತಿಯಲ್ಲಿ ಕುಳಿತನು.ಹಾಜರನ್ನು ಕರೆದು ಅಧ್ಯಾಪಕರು ಪಾಠದ ಕಡೆಗೆ ಬಂದರು.ದೀಪಾವಳಿಯ ಮೊದಲೇ ನೀಡಿದ್ದ ಮನೆಗೆಲಸವನ್ನು

ವಿಚಾರಿಸಿದಾಗ ಯಾವುದೇ ಸಹಪಾಠಿಗಳು ಅದನ್ನು ಮಾಡಿರಲಿಲ್ಲ.ಆದರೆ ಸೋಮುವು ತಾನು ಮಾಡಿದ್ದೇನೆಂದು ಹೇಳಿದಾಗ ಅಧ್ಯಾಪಕರಿಗೆ ಸಂತೋಷವಾಯಿತು.ಸೋಮುವು ಬರೆದುದನ್ನು ಓದಿ ಅಧ್ಯಾಪಕರ ಅಭಿನಂದನೆಗೆ ಪಾತ್ರನಾದನು .ಇದನ್ನೆಲ್ಲಾ ನೋಡಿ ತನ್ನ ಗೆಳೆಯನಾದ ಆನಂದ ಅಸೂಯೆ ಪಟ್ಟನು.ಸೋಮುವು ಎಲ್ಲರೊಡನೆ ಒಳ್ಳೆಯ ರೀತಿಯಲ್ಲಿ ವರ್ತಿಸುತ್ತಿದ್ದನು.ಅವನು ಯಾರಲ್ಲೂ ದ್ವೇಷಗೊಂಡಿರಲಿಲ್ಲ. ಅವನ ಆಸೆಯು ತನ್ನ ತಂದೆಯ ಕಷ್ಟಗಳನ್ನು ನಿವಾರಿಸುವುದಾಗಿತ್ತು.ಶಾಲೆಯಿಂದ ನಗುಮೊಗದಿಂದ ಬಂದ ಸೋಮುವನ್ನು ನೋಡಿ ಆತನ ತಾಯಿಯು ‘ಏನಾಯಿತು ಸೋಮು ಏನೋ ಸಂತೋಷದಲ್ಲಿದ್ದಿ ಅಂತ ತೋರುತ್ತದೆಯಲ್ಲ’ಎಂದಳು.‘ಹಾ ! ಅಮ್ಮಾ ಇವತ್ತು ಅಧ್ಯಾಪಕರು ನನ್ನನ್ನು ಪ್ರಶಂಸಿದರು’ಎಂದು ಉತ್ತರಿಸಿದನು.ಆಗ ಕೇಸರಳು ಖುಷಿಯಿಂದ ‘ನೋಡಿ ನಮ್ಮ ಮಗ ಎಷ್ಟು ಹುಷಾರಿದ್ದಾನೆ ’ಎಂದು ತನ್ನ ಗಂಡನೊಡನೆ ಹೇಳಿದನು.ಯಾವುದೋ ಕೆಲಸದಲ್ಲಿ ತೊಡಗಿದ್ದ

ರಾಮುವು ಕೇಸರಳ ಮಾತಿಗೆ ಕಿವಿಗೊಟ್ಟು ದಿಗ್ಗತಿತನಾಗಿ ಓಡಿ ಬಂದನು.

‘ಹೌದಾ ಸೋಮು ನನಗೆ ತುಂಬಾ ಸಂತೋಷವಾಗುತ್ತಿದೆ.ನನ್ನ ಆಸೆ ನಿನ್ನನ್ನು ಸಾಹೇಬನನ್ನಾಗಿ ಮಾಡಬೇಕು’ಎಂದನು.ಇದನ್ನು ಕೇಳಿದ ಸೋಮುವು ‘ಬೇಡ ಅಪ್ಪಾ .ನನ್ನ ಆಸೆ ಜೀವನದಲ್ಲಿ ನಿಮಗೆ ಸಹಾಯಕನಾಗಬೇಕು ಎಂದಾಗಿದೆ.ಸೋಮುವಿನ ಕಣ್ಣಿನಲ್ಲಿ ನೀರು ತುಂಬಿತು.‘ಈಗಿನ ಮಕ್ಕಳು ಯಾರಾದರೂ ಹೀಗೆ ಹೇಳುತ್ತಾರೆಯೇ ?ಬೇಡ ಮಗಾ ನೀನು ದೊಡ್ಡ ಅಧಿಕಾರಿಯಾದರೆ ನಮ್ಮ ಸಂಸಾರ ಮುಂದುವರೀತಷ್ಟೇ.ಈಗಾಗಲೇ ನನಗೆ ವಯಸ್ಸಾಯಿತು.ನಾಡಿದ್ದು ನಾನು ಹಾಸಿಗೆ ಹಿಡಿದರೆ ಮತ್ತೇನಾಗಬಹುದು ನಮ್ಮ ಸಂಸಾರ ?

ಪೂಜಾ.ಎಮ್

<<<<<<<<<<<<<<<<<<<<<<<<<<<<<<

# वनम्

तत् वनम् | वने वृक्षाः सन्ति |

वृक्षे खगाः निवसन्ति | खगाः कूजन्ति |

ते फलानि खादन्ति | हरिणः चरन्ति |

हरिणशावकाः च धावन्ति | जलं पिबन्ति|





सः सरोवरः| सरोवरे हंसाः विहरन्ति |

कुसुमानि विकसन्ति| जनाः देवं नमन्ति |

ते सदाचारं बोधयन्ति| शिष्याः पठन्ति|

***सुधा सरस्वति***

%%%%%%%%%%%%%%%%%%%%%%%%%%%%%%%%%%%%%%%%%%%%%%%%

# स्वच्छता

स्वच्छता को एक अच्छी स्थान है




हमारा जीवन में |स्वच्छता को द्वे भाग है |आंतरिक और बाह्य शुचित्व |अच्छी आहार सेवन से ,शुद्ध वायु से,शुद्ध जल से ,दो बारे नहाने से और आदी से हमारा बाह्य शुचित्व भी परिपूरण होती है |

प्रकृति की संरक्षण भी हमारा कर्तव्य है |पर आज हम प्लास्टिक वस्तों के उपयोग से प्रकृति मलिन कर रहे है |प्रकृति की संरक्षण से हमारा संरक्षण भी होती है |इसके लिए एक अत्युत्तम उदाहरण है , कि पिछले वार मैं आयी बाँढ |हम प्रकृति को मलिन करने से , इसमें बडें -बडें इमारतों को बडने से हमारे केरल में बाँढ आगयी | इससे हमें पता होना चाहिए कि शुचित्व नहीं तो हम भी नहीं |

शुचित्व के लिए हमारे सरकार के एक योजना है

कि ,स्वच्छ भारत ,सुन्दर भारत |इसके मतलब ,हमारा भारत सुन्दर होने चाहिए तो हमारा परिसर भी मालिन्य विमुक्त होने चाहिए |और प्रसिद्ध कवि मुहम्मद् इखबाल ने कहा है कि हमारा भारत ही विश्व में सबसे अच्छी और सुन्दर देश है |पर आज ये सही नही है |हमारे देश में हम किथर लिखा हैं कि 'इधर मालिन्य मत डालो 'एसा वहाँ ही हम मालिन्य डालते हैं |मुहम्मद् इखबाल ने लिखा भी हैं कि 'सारे जहाँ से अच्छा ,हिन्दु सिता हमारा '|इसका मतलब क्या है ?आज सरा जगह मैं भी मालिन्य है |और हमें पता हैं कि शुचित्व माने क्या है? हमारे जीवन मे इसका मतलब क्या है |और हम क्या कर रहे हैं ?इधर- उधर सारी जगह मैं भी मालिन्य डाल रहे है |

हम सारी जगह मेंभी कार्खानों बडा लिया ,बडे - बडे पेडों को काँट लिया ,इससे हमारा धरती को बहुत दर्द हुई |प्रकृति के बारे में हम एक ओर भी चिंता मत कर

रहीं है |जरा हम सोचने चाहिए कि प्रकृति संरक्षण हमारा कर्तव्य है |हम यह जरूर करना चाहिए |

संस्कृत में एक कहावत हैं कि 'जननी जन्मभूमिश्च , स्वर्गादपि गरीयसी '| इसका मतलब है कि हमारा जन्मभूमि और हमारा माता से बडा बात कुछ भी नहीं है |स्वर्ग से भी बडा बात ही है हमारा माँ और हमारा जन्मभूमि|

इसलिए इसका संरक्षण भी हमारा कर्तव्य है |इसके लिए हम शुचित्व पालन करने चाहिए |इधर – उधर प्लास्टिक वस्तु मत डालो |

स्वच्छता के बारे में संस्कृत में एक श्लोक भी है |

मालिन्यं तु मनुष्याणां
नाशार्थं नास्ति संशयः|
मालिन्यादेव आरोग्यं
आरोग्यं परमं सुखं ||

इसका मतलब है कि मालिन्य केवल मानव के विनाश के लिए ही है |और मालिन्य न तो हम आगे बडेगा |स्वच्छता की पालन करे 'और आगे बडो' एक खतम स्वच्छता के लिए भी हमें चाहिए |

संस्कृत में एक और कहावत है कि 'स्वस्थाः जनाः राष्ट्रस्य सम्पदः'|आरोग्य पूर्ण व्यक्तियों है हमारा देश का अनमोल खजाना ,स्वच्छता से ये सब होती है|

हम सदा हमारे प्रकृति को मलिन कर रहां थी|और इसके लिए प्रकृति हमें लिया एक उत्तर है ,वह बाँढ |हम प्रकृति को मलिन किया ,और इससे हमारा नाश भी हुई |और हमें अब पता हैं की भूख क्या है ?दारिद्र भी क्या है ?केरल में सुनामी आयी ,ओखी आयी और अब बाढँ भी आयी |पर आज भी हम नही पठा |स्वच्छता को हमे पालन करने चाहिए |प्लास्टिक का उपयोग कम करने से तोडा सा स्वच्छता होती है |और इन प्लास्टिकों को इधर – उधर डालने के स्थान में उचित स्थान

में डालने से शुचित्व पूरा होती है |

गाँधीजी ने बोला है कि हमारा देश सुन्दर होना चाहिए | और हम उस महान व्यक्ति का सपना सच करने चाहिए | मालिन्य विमुक्त देश ही है  हमारा विश्व में सबसे अच्छा और सुन्दर देश  |

प्रकृति की स्वच्छता ही है हमारा कर्तव्य | इसके लिए एक वृक्ष काँटने के स्थान में हम करोडों वृक्षों बहने चाहिए| स्वच्छ भारत सुन्दर भारत|  इसके लिए एक अच्छी मार्ग है प्लास्टिक का उपयोग कम करना और एक खतम स्वच्छता के लिया |

|| स्वच्छ भारत

सुन्दर भारत ||

- वैदेही.के

# ಸ್ವಾತಂತ್ರ್ಯದಿನಾಚರಣೆಯ ಮಹತ್ವ

ಭಾರತವು ಹಿಂದಿನ ಕಾಲದಿಂದ ವಿವಿಧ ದೇಶದ ಜನರಿಗೆ ವಾಸಮಾಡಲು ಮತ್ತು ಭಾರತದಲ್ಲಿಯೇ ತಮ್ಮ ಕೆಲಸಗಳನ್ನು ನಿರ್ವಹಿಸಲು ಸಹಕಾರವನ್ನಿತ್ತ ದೇಶವಾಗಿದೆ.ಭಾರತ

ಎಂದು ಹೇಳುವಾಗಲೇ ಬೇರೆ ದೇಶದವರಿಗೆ ನೆನಪು ಬರುವುದು ಅತ್ಯಂತ ಹೆಚ್ಚು ಬೆಳೆಗಳಿಂದ ಸಮೃದ್ಧವಾಗಿದ್ದುದರಿಂದಲೇ ಇಲ್ಲಿ ಅನೇಕ ವಿದೇಶಿಯುವರು ಬಂದು ತಮ್ಮ ಸಂಸ್ಕೃತಿಯನ್ನು ಇಲ್ಲಿ ಪ್ರಚಾರ ಮಾಡಲು ಪ್ರಯತ್ನಿಸಿದು.ಇಲ್ಲಿಗೆ ಬಂದಂತಹ ವಿದೇಶೀಯರಲ್ಲಿ ಬ್ರಿಟೀಷರು ಅತ್ಯಂತ ಹೆಚ್ಚು ಕಾಲ ಭಾರತವನ್ನು ತಮ್ಮದಾಗಿಸಿಕೊಂಡರು.

ಬ್ರಿಟೀಷರು ಭಾರತೀಯ ಸಂಸ್ಕೃತಿಯನ್ನು ಪೂರ್ಣವಾಗಿ ಅವಗಣಿಸಿದ ವಿದೇಶಿಯರಾಗಿದ್ದಾರೆ.ಇವರು ಭಾರತದಲ್ಲಿ ಬಂದು ಕಾಲಕ್ಕೆ ಏಕ್ಟ್ ಎಂಬ ಕಾನೂನಿನ ಮೂಲಕ ಭಾರತದ ಪೌರರನ್ನು ಅತಿಯಾಗಿ ಶೋಷಣೆಗೆ ಈಡಾಗಿಸಿದರು.ಈ ನಿಯಮವು ಮುಂದೆ ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ವಿರುದ್ಧವಾಗಿ

ಭಾರತವನ್ನು ದಂಗೆಗೇಳುವಂತೆ ಮಾಡಿತು.ಬ್ರಿಟಿಷರ ಆಳ್ವಿಕೆಯ ಪರಿಣಾಮವಾಗಿ ಭಾರತದ ಪೌರರ ಸ್ವಭಾವ ಹಾಗೂ ಚಟುವಟಿಕೆಗಳಲ್ಲಿ ಅದರ ಪ್ರಭಾವವು ಈಗಿನ ಕಾಲದಲ್ಲಿ ಕಂಡು ಬರುತ್ತದೆ.

ಚರಿತ್ರೆಯಲ್ಲೇ ಇತಿಹಾಸವನ್ನು ಸೃಷ್ಟಿಸಿದ ಭಾರತವನ್ನು ಸ್ವಾತಂತ್ರ್ಯ ಸಂಗ್ರಾಮವು ಅತ್ಯಂತ ಮಹತ್ತರವಾದುದಾಗಿದೆ. ಈ ಸ್ವಾತಂತ್ರ್ಯ ಸಂಗ್ರಾಮದ ಫಲವಾಗಿ 1947 ಅಗಸ್ಟ್ 15 ಅಥವಾ ಹದಿನಾಲ್ಕರಂದು ಭಾರತವು ಬ್ರಿಟಿಷರ ಅಧೀನದಿಂದ ವಿಮೋಚನೆಗೊಂಡಿತು.ಈ ದಿನವು ಭಾರತದ ಇತಿಹಾಸದಲ್ಲಿಯೇ ಸುವರ್ಣಾಕ್ಷರಗಳಿಂದ

ಬರೆದಿಡಬೇಕಾದ ದಿನವಾಗಿದೆ.

ಈ ದಿನಕ್ಕಾಗಿ ವರ್ಷಗಳ ಕಾಲ ಕಾರ್ಯ ನಿರತರಾದಂತಹ ಭಗತ್ ಸಿಂಗ್,ಮಹಾತ್ಮಾಗಾಂಧಿ,ಸುಭಾಷ್ ಚಂದ್ರ ಬೋಸ್,ಬಾಲ ಗಂಗಾಧರ ತಿಲಕ್,ಲಾಲಾ ಲಜಪತ್ ರಾಯ್ ಇತ್ಯಾದಿ ಇತಿಹಾಸವನ್ನು ಸೃಷ್ಟಿಸಿದ ವೀರರೂ, ರಾಣಿ ಗೈಡಿಲಿ ,ಝಾನ್ಸಿರಾಣಿ ಲಕ್ಷ್ಮೀ ಬಾಯಿ ಇತ್ಯಾದಿ ವೀರವನಿತೆಯರನ್ನೂ

ನಾವು ನೆನಪಿಸಬೇಕಾದುದು ಅತ್ಯಂತ ಅನಿವಾರ್ಯವಾಗಿದೆ.

ಕೇವಲ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುವಾಗ ಮಾತ್ರವಲ್ಲ,ಸ್ವಾತಂತ್ರ್ಯ ದಿನಾಚರಣೆಯ ಭಾಷಣ ಸಂದರ್ಭದಲ್ಲಿ ಅಥವಾ ಸ್ವಾತಂತ್ರ್ಯ ದಿನಾಚರಣೆಗೆ ಸಂಬಂಧಿಸಿದ ಇತರ ಕಾರ್ಯಕ್ರಮವನ್ನು ಆಯೋಜಿಸಿದಾಗ ಮಾತ್ರವಲ್ಲ ದಿನವೂ ಕ್ಷಣ ಕ್ಷಣಗಳಲ್ಲೂ ನಮಗೆ ಸುಧೀರ್ಘವಾದ ಹೋರಾಟದ ಅಂತ್ಯದಲ್ಲಿ ಸ್ವಾತಂತ್ರ್ಯವನ್ನು ತಂದುಕೊಟ್ಟ ಪ್ರತಿಯೊಬ್ಬ ಭಾರತೀಯ ಪೌರನನ್ನೂ ಅವನ ದೇಶಸ್ನೇಹವನ್ನೂ ಅಂತೆಯೇ ಇತಿಹಾಸವನ್ನು ಸೃಷ್ಟಿಸಿದ ಮಹಾನ್ ವ್ಯಕ್ತಿಗಳನ್ನು ನಾವು ಈ ಸಂಧರ್ಭದಲ್ಲಿ ನೆನಪಿಸಿಕೊಳ್ಳಬೇಕು.

ನಮ್ಮ ಭಾರತದ ಪತಾಕೆಯಾದ ತ್ರಿವರ್ಣ ಧ್ವಜವನ್ನು ನಾವು ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಬಾನೆತ್ತರಕ್ಕೆ ಹಾರಿಸುವಾಗ ಅದರಲ್ಲಿರುವ ಕೇಸರಿ ಬಣ್ಣ ತ್ಯಾಗವನ್ನು,ಬಿಳಿ ಬಣ್ಣ ಶಾಂತಿ ಹಾಗೂ ಹಸಿರು ಬಣ್ಣ ಸಮೃದ್ಧಿಯನ್ನೂ ಸೂಚಿಸುವುದು.ಇಂದಿನ ಜನಾಂಗವು ಶಾಂತಿಯುತವಾಗಿ ಯಾವಾಗಲೂ ಇರುವುದಿಲ್ಲ.ಯಾಕೆಂದರೆ ,ಇಂದು ಸಮಾಜದಲ್ಲಿ

ದರೋಡೆ, ಗಲಾಟೆ ಎಂಬಿವುಗಳು ಅತ್ಯಂತ ಹೆಚ್ಚಾಗಿ ಕಂಡು ಬರುತ್ತವೆ . ಆದುದರಿಂದಲೇ ಇಂದು ಭಾರತವೆಂಬ ಸಾಮ್ರಾಜ್ಯವು ಹೇಗೆ ಶಾಂತಿಯಿಂದರಬಹುದು? ಎಂಬ ಪ್ರಶ್ನೆಗೆ ನಮ್ಮ ರಾಷ್ಟ್ರಧ್ವಜದಲ್ಲಿರುವ ಬಣ್ಣದ ಸಂಕೇತಗಳನ್ನು ನಾವು ನಮ್ಮ ಜೀವನದಲ್ಲಿ ಹುದುಗಿಸಿಕೊಳ್ಳಬೇಕು.

ಕೇವಲ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡು ಇತಿಹಾಸವನ್ನು ಸೃಷ್ಟಿಸಿದ ವ್ಯಕ್ತಿಗಳನ್ನು ಮಾತ್ರವಲ್ಲ ಇಂದು ನಮ್ಮ ಗಡಿಯನ್ನು ಕಾಯುತ್ತಿರುವ ವೀರ ಜವಾನರನ್ನೂ ನಾವು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು.

ಕೇವಲ ನಮ್ಮ ದೇಶವು ಪ್ರಜಾಪ್ರಭುತ್ವ ದೇಶ ಅಥವಾ ಸ್ವತಂತ್ರ ಹೇಳುವ ಬದಲು, ನಾವು ನೆನಪಿಸಿಕೊಳ್ಳಬೇಕಾದ ಸ್ವಾತಂತ್ರ್ಯ ಹೋರಾಟಗಾರರ ಜೀವನ ಚರಿತ್ರೆಯನ್ನು ತಿಳಿದುಕೊಂಡು ಅದೇ ರೀತಿ ರಾಷ್ಟ್ರಕ್ಕಾಗಿ ಪ್ರಾಣ ತ್ಯಾಗ ಮಾಡಲು ನಾವು ಸಿದ್ಧರಾಗಿರಬೇಕುಎಂಬುದನ್ನು ಪ್ರತಿಯೊಬ್ಬ ಭಾರತೀಯ ಪೌರನಲ್ಲಿಯೂ ಇರಬೇಕಾದ ಅನಿವಾರ್ಯತೆಯ ಕುರಿತು

ಇದು ನಮ್ಮನ್ನು ನೆನಪಿಸಿಕೊಳ್ಳುತ್ತದೆ.

ಇಂದಿನ ಸಮಾಜದಲ್ಲೂ ಸ್ತ್ರೀಯರಿಗೆ ಕೀಳಾದ ಸ್ಥಾನಮಾನವನ್ನು ಕಲ್ಪಿಸಿದ ಕೆಲವೆಡೆಗಳಲ್ಲಿ ವಾಸಿಸುವ ಜನರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಝಾನ್ಸಿರಾಣಿಯಂತಹ ವೀರವನಿತೆಯರನ್ನು ನೆನಪಿಸಬೇಕು. ಯಾಕೆಂದರೆ ರಾಣಿ ಲಕ್ಷ್ಮೀಬಾಯಿಯು ದತ್ತು ಪುತ್ರ ನನ್ನು ತನ್ನ ಬೆನ್ನಮೇಲೆ ಏರಿಸಿಕೊಂಡು ಸಾಹಸಿಕವಾಗಿ ನಡೆದ ಯುದ್ಧವನ್ನು ನೋಡಿಯಾದರೂ ಪುರುಷರಿಗೆ ಸಮಾನವಾದ ಕೆಲವು ಗುಣಗಳು ಸ್ತ್ರೀಯರಲ್ಲಿಯೂ ಇದೆ ಎಂದು ತಿಳಿದುಕೊಂಡು ವರ್ತಿಸಬೇಕಾದ ಅನಿವಾರ್ಯತೆಯ ಕುರಿತು ನಾವು ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪಾಲ್ಗೊಂಡು ಮನದಟ್ಟು ಮಾಡಬೇಕು.

ಒಟ್ಟಿನಲ್ಲಿ ಹೇಳುವುದಾದರೆ ಪ್ರಾಣತ್ಯಾಗವನ್ನೂ ಮಾಡಲು ಶಕ್ತರಾದಂತಹ ಒಂದು ಸಮಾಜದ ರಕ್ತದ ಪ್ರತಿಯೊಂದು ಕಣದಲ್ಲೂ ರಾಷ್ಟ್ರ ಪ್ರೇಮವೆಂಬ ಕಿಡಿಯು ಇರಬೇಕು. ಭಾರತದ ಉನ್ನತಿಗಾಗಿ ಸದಾ ಕಾರ್ಯ ನಿರತವಾಗಿರುವ ಸಮಾಜವನ್ನು ಸೃಷ್ಟಿಸಲೂ ಸ್ವಾತಂತ್ರ್ಯ

ದಿನಾಚರಣೆಯು ಸಹಾಯಕವಾಗಿದೆ.

ಹಿಂದು,ಬುದ್ಧ,ಜೈನ,ಕ್ರೈಸ್ತ,ಸಿಕ್,ಮುಸಲ್ಮಾನ ಎಂಬ ಈ ಎಲ್ಲಾ ಮತಗಳು ಒಂದೇ ತಾಯಿ ಮಕ್ಕಳು. ಭಾರತವೆಂಬ ದೇಶಮಾತೆಯ ಒಡಲಿನಲ್ಲಿ ಈ ಮತಗಳೆಲ್ಲಾ ಸ್ಥಿರವಾಗಿವೆ.ಸ್ವಾತಂತ್ರ್ಯಕ್ಕಾಗಿ ಹೋರಾಡಲು ಮತವೆಂಬುದರ ಅವಶ್ಯಕತೆಯು ಇಲ್ಲ.ಬದಲಾಗಿ ದೇಶ ಪ್ರೇಮವೆಂಬ ಕಿಡಿಯು ಎಲ್ಲೆಲ್ಲೂ ಹಾರಿ ಒಂದಿಷ್ಟು ಶಾಂತಿಯನ್ನು ತಂದು ಕೊಡಬೇಕಾದ ಅನಿವಾರ್ಯತೆ ಇದೆ.

ವಿವಿಧ ಮತಗಳೊಂದೊಡಗೂಡಿದ ಭಾರತವು ಕಲೆ,ಸಂಸ್ಕೃತಿ,ಭಾಷೆ ಎಂಬಿವುಗಳ ಸಮೃದ್ಧಿಗೆ ಕಾರಣವಾಗಿದೆ.ರಾಷ್ಟ್ರ ಧ್ವಜದಲ್ಲಿ ಇರುವ ಹಸಿರು ಬಣ್ಣದ ಸಂಕೇತವಾದ ಸಮೃದ್ಧಿಯು ನಮ್ಮ ದೇಶಕ್ಕೆ ಪ್ರಾಪ್ತವಾಗಬೇಕಾದರೆ ನಮ್ಮಲ್ಲಿ ಹಲವು ರೀತಿಯ ಸಂಸ್ಕೃತಿ,ಭಾಷೆ,ಕಲೆ ಇತ್ಯಾದಿ ಮಾತ್ರವಲ್ಲದೆ ಹಿಂದಿನಂತೆ ಮಣ್ಣಿಗಿಳಿದು ಕೃಷಿ ಮಾಡಿ ಬದುಕಬೇಕಾದ ಅನಿವಾರ್ಯತೆಯನ್ನೂ ಆಹಾರಕ್ಕೆ ಬೇರೆ ರಾಜ್ಯವನ್ನಾಶ್ರಯಿಸುವ ನಾವು ಮನಗಾಣಬೇಕಾದ ಅನಿವಾರ್ಯತೆ ಇದೆ.

ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುವ ಪರವಾಗಿ ನಾವು ಅನೇಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತೇವೆ.ಇದರ ಬದಲಾಗಿ ನಾವು ಇದು ಸೂಚಿಸುವ ಸಂಕೇತಗಳನ್ನು ತಿಳಿದುಕೊಂಡು ಅದನ್ನು ನಮ್ಮ ಜೀವನದಲ್ಲಿ ಅಳವಡಿಸಬೇಕು.ಮುಂದೊಮ್ಮೆ ನಮ್ಮ ರಾಷ್ಟ್ರವು ಇನ್ನೊಂದು ದೇಶದ ಅಧೀನವಾದರೆ ನಾವೂ ಸಹ ನಮ್ಮ ದೇಶಕ್ಕಾಗಿ ಪ್ರಾಣ ತ್ಯಾಗವನ್ನು ಮಾಡಲು ಸಿದ್ಧರಾಗಬೇಕು.

||ವಂದೇ ಮಾತರಂ||

||ಜೈ ಜವಾನ್ ಜೈ ಕಿಸಾನ್||

||ಜೈ ಹಿಂದ್||

ಶ್ರುತಿ .ಎ

9 ನೇ ತರಗತಿ

&&&&&&&&&&&&&&&&&&&&&&&&&&&&

# അസൂയ തീരാ നല്ലദല്ല

ഒരു ചെരിയ ഗൃമം.ആ ഗൃമതിനേ രംഗപുരം എന് വിലികുനു. രംഗപുരത്തില് നേഹാ എന് പെരുള്ലപെണ് കുട്ടി പിന്നെ അവളുഡെ ചെടന് ഉഡയിരുനു്ു.ചെടന് വളരെ കഷ്ട്ടപെട്ട അവളെ സ്കൂളലെക് അയകുനുഡയിരുനു. അവളുഡെ വീടിനിഡെ അഡുത് പൂജാ എന്നപെണ് ഉഡയിരുനു്. പുജ പഡികുനാ സ്കുളില് തനെ നേഹാ പഡികുനുഡയിരുനു. ക്ലാസില് നെഹാ ഫസ്റ്റ അയിരുനു. നെഹാന് എലാവരകും ഇഷടാ മായിരുനു. എനാല് പുജാ എനാ പെണ്കുടിക് നെഹ എനാവളൂഡ് ഇഷടാ മായിരുനിലാ. രെഡ് കൊലം വരുബൊള് അവര് പതില് എതി. അവളുഡ് എട്ടന് അവളൊഡ് വളരെ ഇഷടാ മായിരുനു.

10 മ് ക്സാസില് നെഹാ 10 A+ നൊപം വിജയം കെ വരിചു.ഇദിനൊപം പുജക് നെഹനൊഡ് അസുയ വര്ദിചു. അദിന് ശെശം നെഹാനൊഡ് പുജയുഡ് കുഡുബതിന് അബിമാനം തൊനി.എലം സ്ഥലാത് നെഹയുഡ് പെര് തനെ പരയുനുഡയിരുനു. ഇദിനൊഡൊപം നോഹനൊഡ് പുജക് അസൂയ വര്ദിചു വനു.

നെഹയുഡെ എട്ടന് അവളെ കൊല്ജ് ചെര്തു. അവള് പഡികുവന് വെരെ നഗരതിലെക് ചെലെഡി വനു.

സംഗ്രഹ :പൂജാ.എമ്

........................................................................

# Two good friends

One summer morning. Pierre looked around his room and decided it needed to be cleaned. He had plenty of time before he met his friends at the park. A little later,one of his friends,Jacques came knowing at his door.”Hey ,what are you doing Pierre? Let's go and play. It's a lovely summer day,”said Jacques,please don't bother me just now,”replied Pierre. Seeing that Pierre would not come to play till 3 O' clock,Jacques was tempted to play a trick on him. He turned Pierre's clock back by two hours.




Pierre got so engrossed in cleaning his room,that he did not realise what time it always,until two other friends knocked at his door.”Hey!Pierre!We have been waiting for you!”that sad.”Yes,yes,I am just

leaving. Why didn't you just wait for me at the park?"asked Pierre."Wait?Do you know it is past 5 o' clock?We should be home by now. See you tomorrow , bye, " replied his friends. Pierre looked at his clock

and knew someone had played a practical joke. That person could only  Jacques. He decided he was never,ever,going to speak or play with him. Jacques mean while felt guilty and went to Pierre's house to say he was sorry but Pierre wasn't at home.

He walked towards the park and there he saw Pierre walking towards him."Hey Pierre,isn't it late for you come out to play?Ha! Ha!"he laughed."Do not joke with me!I know you turned the hands of my clock. I don't think it was funny!"shouted Pierre."I.....I.....eh...,"Pierre was gone before Jacques could say another word. The next day,Jacques was

still feeling guilty,so he went over to Pierre and said,”I am very, very sorry.”Pierre did not say anything and protended  that he had not even seen Jacques. The following day,Jacques came again with some more of his friends. He brought Pierre's favourite chocolates thinking it would help win him over. It did not. Pierre was still upset with Jacques.”Well,I tried everything to show him I was sorry,”thought Jacques and left.

The next day,Pierre was walking alone a busy street. He was on his way to the market when he was knocked down by a speeding car. Nobody came to help Pierre for a while. Then all of a sudden,he felt someone gently carrying him and laying him in the back seat of a taxi. It was Jacques. He had got a taxi driver to help him.

At the hospital,the doctor said that Pierre had been brought just in time. If he had lost more blood,he would have been in a worse condition .Pierre

was very grateful to Jacques. He felt guilty that had not been able forgivably and forget Jacques 'Little prank.”Thank you,my friend,for saving my life. It's funny how I didn't see the funny side of your prank,”said Pierre.

MORAL:Little incidents may seem big at the time,
When really and truly they aren't,
Forgive and forget is what we must do,
Even though we feel we can't!`

Sreepriya. M

9 th Standard

,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,

# ಪರಿಶ್ರಮವೇ ಪರಮಧರ್ಮ



ಪರಿಶ್ರಮ ಪಟ್ಟರೆ ಯಾವುದು ಕಷ್ಟ
ಹತ್ತಬಹುದು ಆಗಸವನ್ನೇ
ಪರಿಶ್ರಮವಿಲ್ಲದೆ ಪರಿತಪಿಸಿದರೆ
ಕಷ್ಟವಾಗಿಸುವೆವು ಜೀವನವನ್ನೇ

ಜೀವನದಲ್ಲಿ ಕಠಿಣವಿಲ್ಲದಿಲ್ಲ
ಪರಿಶ್ರಮ ಪಟ್ಟರೆ ನಮ್ಮಲ್ಲಿ
ಸೋಲೋ ಗೆಲುವೋ ಯಾವುದೆ ಇರಲಿ
ಪರಿಶ್ರಮ ಬೇಕು ಮೊದಲಲ್ಲಿ

ಹಂತಗಳಿರುವುದು ಜೀವನದಲ್ಲಿ
ಸಮಸ್ಯೆಯು ಕಾಣುವುದಲ್ಲಲ್ಲಿ

ಎಡವಿ ಬೀಳದೆ ನೆಟ್ಟಗೆ ನಡೆದು

ಎದುರಿಸಬೇಕದನಲ್ಲಲ್ಲಿ

ಮಳೆ ಚಳಿ ಬಿಸಿಲು ಯಾವುದೇ ಇಲ್ಲ

ಹೊಲದಲಿ ದುಡಿಯುವ ರೈತನಿಗೆ

ಪರಿಶ್ರಮ ಆತನ ಜೀವನ ಗುರಿಯು

ಕಠಿಣವಿದಿಲ್ಲ ಆತನಿಗೆ



ದುಡಿಮೆಯೆ ದೇವರು ಮಾತನು ಸಾರುವ

ನಮ್ಮೀ ಜೀವನ ಸಾರ್ಥಕವು

ಪರಿಶ್ರಮ ಪಟ್ಟರೆ ಎಲ್ಲವು ಸಾಧಿಸಿ

ದುಡಿತದಿ ಮೆರೆವುದು ಜೀವನವು

ಸೋಲನು ಮೆಟ್ಟಿ ಗೆಲುವನು ಹತ್ತಲು

ಬರುವುದು ಕಷ್ಟ ಎದುರೆದುರಲ್ಲಿ

ಗೆಲುವೇ ನಮ್ಮಯ ಅಂಗೈಯಲ್ಲಿರುವುದು

ಹಿಡಿದಿರಿಸುವ ನಾವು ಮುಷ್ಟಿಯಲಿ.

ಶ್ರಮವಿದ್ದರೆ ಗೆಲುವಿರುವುದು

ಗೆಲುವಿದ್ದಲ್ಲಿ ಸೋಲಿರುವುದು

ಯಾವುದೇ ಇರಲಿ ಯಾವುದೇ ಬರಲಿ

ಪರಿಶ್ರಮವೇ ಪರಮಾರ್ಥ

ಅಮೃತ ಯು ಆರ್

@@@@@@@@@@@@@@@@@@@@@@@

# पुल बनी थी माँ



नरेन्द्र पुंडरीक

हम भाईयों के बीच
पुल बनी थी माँ
जिसमें आऐ दिन
दौडती रहती थी बेधडक
बिना किसी हरी लाल बत्ती के
हम लोगों की छुक छुक छक छक
पिता के बाद
हम भाईयों के बीच
पुल बनी माँ
अचानक नहीं टूटी
धीरे-धीरे टूटती रही
हम देखते रहे और
मानते रहे कि
बुढा रही है माँ
माँ के बार बार कहने को
हम मानकर चलते रहे






उसके बूढ़े होने की आदत
औरअपनी हर आवाजमें
धीरे-धीरे टूटती  रही माँ
हाथों हाथ रहती माँ
ऐक दिन हमारे कंधों में आ गई
धीरे-धीरे महसूस करने लगे हम
अपने वृषभ कंधों में
माँ का भारी होना
जब तक जीवित रही माँ
हम बदलते रहे अपने कंधे
माँ आखिर माँ ही तो है
बार बार हमें कंधे बदलते देख
हमारे कंधों से उतर गई माँ
और माँ के कंधों से उतरते ही
उतर गए हमारे कंधे

**शालिनी.के**

**************************************************